**ಓ.ಎಸ್. ನಂಬರಃ 44/2025**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 25-09-2025)**

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಸಿ.ಎಂ.ಡಿ. ವಕೀಲರಿಂದ,**

ನಾನು ಈ ದಾವೆಯಲ್ಲಿ ವಾದಿ ಇದ್ದು, ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ದಾಖಲಿಸಿದ್ದು ಅದನ್ನು ನಾನು ಓದಿ ನೋಡಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ನಿಜ ಇರುತ್ತವೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮೂನೆ-9 ಮತ್ತು ನಮೂನೆ-11(ಎ) ನ್ನು ಹಾಜರುಪಡಿಸಿದ್ದು, ಸ್ದರಿ ದಾಖಲೆಯನ್ನು ಗುರುತಿಸಲು 1ನೇ ಪ್ರತಿವಾದಿ ಪರ ವಕೀಲರು ಸ್ದರಿ ದಾಖಲೆಯನ್ನು ಸರ್ಕಾರಿ ಜಮೀನನ್ನು ಸೇರಿಸಿ ಪಡೆದುಕೊಳ್ಳಲಾಗಿದೆ ಎಂದು ತಕರಾರು ಮಾಡಿರುತ್ತಾರೆ. ಹೀಗೆ ಅವರ ತಕರಾರಿಗೆ ಒಳಪಟ್ಟು ಅವುಗಳನ್ನು ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕಃ 02-11-2023 ರ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು, ದಿನಾಂಕಃ 22-02-2024 ರ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-4 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಅದರ ಹಿಂದಿನ ಮಾಲೀಕರು ಪಡೆದ ನಮೂನೆ-9 ಮತ್ತು ನಮೂನೆ-11(ಎ) ನ್ನು ಹಾಜರುಪಡಿಸಿದ್ದು, ಸ್ದರಿ ದಾಖಲೆಯನ್ನು ಗುರುತಿಸಲು 1ನೇ ಪ್ರತಿವಾದಿ ಪರ ವಕೀಲರು ಸ್ದರಿ ದಾಖಲೆಯನ್ನು ಸರ್ಕಾರಿ ಜಮೀನನ್ನು ಸೇರಿಸಿ ಪಡೆದುಕೊಳ್ಳಲಾಗಿದೆ ಎಂದು ತಕರಾರು ಮಾಡಿರುತ್ತಾರೆ. ಹೀಗೆ ಅವರ ತಕರಾರಿಗೆ ಒಳಪಟ್ಟು ಅವುಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸರ್ವೆ ನಕಾಶೆ ಮತ್ತು ಪ್ಲೋಟಿಂಗ್ ನಕ್ಷೆಯನ್ನು ಹಾಜರುಪಡಿಸಿದ್ದು, ಅವುಗಳನ್ನು ಗುರುತಿಸಲು 1ನೇ ಪ್ರತಿವಾದಿ ಪರ ವಕೀಲರು ಸ್ದರಿ ದಾಖಲೆಯನ್ನು ಸರ್ಕಾರಿ ಜಮೀನನ್ನು ಸೇರಿಸಿ ಪಡೆದುಕೊಳ್ಳಲಾಗಿದೆ ಎಂದು ತಕರಾರು ಮಾಡಿರುತ್ತಾರೆ. ಹೀಗೆ ಅವರ ತಕರಾರಿಗೆ ಒಳಪಟ್ಟು ಅವುಗಳನ್ನು ನಿಪಿ-7 ಮತ್ತು ನಿಪಿ-8 ಎಂದು, ಆನ್ ಲೈನ್ ಮುಖಾಂತರ ತೆರಿಗೆ ಪಾವತಿಸಿದ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-9 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ಕೆವಿಟಿ ನಮೂನೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-10 ಎಂದು, ಸಹಾಯಕ ಆಯುಕ್ತರು, ಭಟ್ಕಳ ರವರ ನ್ಯಾಯಾಲಯದಲ್ಲಿ ದಿನಾಂಕಃ 20-08-2019 ರಂದು ಆದ ನಡಾವಳಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

**2 ಮತ್ತು 3ನೇ ಪ್ರತಿವಾದಿಗಳು ಏಕತರ್ಫಿಯಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**1ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**